Kerala Gazette No. 32 dated 11th August 2020.

**PART I** **Section iii**

# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಜಿ) ಇಲಾಖೆ

## ಅಧಿಸೂಚನೆ

*2018 ಫೆಬ್ರವರಿ 12,*

ನಂಬ್ರ 23606/ಲೆಗ್. ಜಿ2/2017/ಕಾನೂನು. *ತಿರುವನಂತಪುರಂ,* *1193 ಮಕರ 29/*

*1939 ಮಾಘ 23.*

2018 ಫೆಬ್ರವರಿ 12ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಇಲಾಖೆ ಕಾರ್ಯದರ್ಶಿ.*

## 2018ರ 15ನೇ ನಂಬ್ರ ಅಧ್ಯಾದೇಶ

## 2018ರ ಕೋಝಿಕೋಡ್ ವಿಶ್ವವಿದ್ಯಾಲಯ (ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆ) ಅಧ್ಯಾದೇಶ

ಭಾರತ ಗಣರಾಜ್ಯದ ಅರುವತ್ತೊಂಬತ್ತನೇ ವರ್ಷದಲ್ಲಿ ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿತು.

ಕೋಝಿಕೋಡ್ ವಿಶ್ವವಿದ್ಯಾಲಯ ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆ ಮಾಡುವುದಕ್ಕಿರುವ

ಒಂದು

ಅಧ್ಯಾದೇಶ

**ಪೀಠಿಕೆ**—2017ರ ಕೋಝಿಕೋಡ್ ವಿಶ್ವವಿದ್ಯಾಲಯ (ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆ) ಅಧ್ಯಾದೇಶ (2017ರ 24)ವು 2017 ನವೆಂಬರ್ 20ನೇ ದಿನಾಂಕದಂದು ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟರೂ;

ಹಾಗೂ 2018 ಜನವರಿ 22ನೇ ದಿನಾಂಕದಂದು ಪ್ರಾರಂಭಗೊಂಡು 2018 ಫೆಬ್ರವರಿ 7ನೇ ದಿನಾಂಕದಂದು ಅಂತ್ಯಗೊಂಡ ಕೇರಳ ರಾಜ್ಯ ವಿಧಾನಸಭೆಯ ಅಧಿವೇಶನ ಕಾಲದಲ್ಲಿ ಪ್ರಸ್ತುತ ಅಧ್ಯಾದೇಶದ ಬದಲಾಗಿ ರಾಜ್ಯ ವಿಧಾನಸಭೆಯ ಒಂದು ಅಧಿನಿಯಮವನ್ನು ಜಾರಿಗೆ ತರುವುದಕ್ಕಾಗಿ ಒಂದು ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಮಂಜೂರು ಮಾಡಲು ಸಾಧ್ಯವಾಗದಿರುವುದರಿಂದಲೂ;

ಹಾಗೂ, ಭಾರತ ಸಂವಿಧಾನದ 213ನೇ ಅನುಚ್ಛೇದದ (2)ನೇ ಖಂಡದ (ಎ) ಉಪಖಂಡದ ಪ್ರಕಾರ, 2017ರ ಕೋಝಿಕೋಡ್ ವಿಶ್ವವಿದ್ಯಾಲಯ (ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆ) ಅಧ್ಯಾದೇಶ (2017ರ 24)ಕ್ಕೆ 2018 ಮಾರ್ಚ್ 5ನೇ ದಿನಾಂಕದಿಂದ ಪ್ರಾಬಲ್ಯ ಇಲ್ಲದಾಗುವುದರಿಂದಲೂ;

ಹಾಗೂ ಪ್ರಸ್ತುತ ಅಧ್ಯಾದೇಶದ ಉಪಬಂಧಗಳನ್ನು ಊರ್ಜಿತದಲ್ಲಿರಿಸದಿದ್ದಲ್ಲಿ ಸಮಸ್ಯೆಗಳು ಉದ್ಭವಿಸುವುದರಿಂದಲೂ;

ಹಾಗೂ ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲೂ, ಹಾಗೂ ತಾನು ತುರ್ತುಕ್ರಮಗಳನ್ನು ಕೈಗೊಳ್ಳಲು ಅಗತ್ಯವಾದ ಸನ್ನಿವೇಶಗಳು ಅಸ್ತಿತ್ವದಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ (1)ನೇ ಖಂಡದ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಇಚ್ಛಿಸುತ್ತಾರೆ:—

1. ಸಂಕ್ಷಿಪ್ತ ನಾಮ ಮತ್ತು ಪ್ರಾರಂಭ.—(1) ಈ ಅಧ್ಯಾದೇಶವನ್ನು 2018ರ ಕೋಝಿಕೋಡ್ ವಿಶ್ವವಿದ್ಯಾಲಯ (ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆ) ಅಧ್ಯಾದೇಶವೆಂದು ಕರೆಯಬಹುದು.

(2) ಇದು 2017 ನವೆಂಬರ್ 21ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ಕೋಝಿಕೋಡ್ ವಿಶ್ವವಿದ್ಯಾಲಯದ ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆಗಾಗಿ ಬೇಕಾದ ವಿಶೇಷ ಉಪಬಂಧ.—(1) 1975ರ ಕೋಝಿಕೋಡ್ ವಿಶ್ವವಿದ್ಯಾಲಯ ಅಧಿನಿಯಮ (1975ರ 5)ದಲ್ಲಿ ಅಥವಾ ಅದರಡಿಯಲ್ಲಿ ಮಾಡಿರುವ ಯಾವುದಾದರೂ ಸ್ಟಾಟ್ಯೂಟ್‌ಗಳು, ರೆಗ್ಯುಲೇಶನ್‌ಗಳು, ಓರ್ಡಿನನ್ಸ್‌ಗಳು, ನಿಯಮಗಳು ಅಥವಾ ಯಾವುದಾದರೂ ನ್ಯಾಯಾಲಯದ ಯಾವುದಾದರೂ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿರಲಿ, ಈ ಅಧ್ಯಾದೇಶವು ಜಾರಿಗೆ ಬರುವ ದಿನಾಂಕದ ಮೊದಲು ಅಧಿಕೃತ ಕಾಲಾವಧಿಯು ಅಂತ್ಯಗೊಂಡ ಕೋಝಿಕೋಡ್ ವಿಶ್ವವಿದ್ಯಾಲಯದ ಸೆನೆಟಿನ ಹಾಗೂ ಸಿಂಡಿಕೇಟಿನ ವಿಷಯದಲ್ಲಿ ಪ್ರಸ್ತುತ ವಿಶ್ವವಿದ್ಯಾಲಯದ ಸೆನೆಟಿನ ಹಾಗೂ ಸಿಂಡಿಕೇಟ್‌ನ ಹೊಣೆಗಾರಿಕೆಗಳನ್ನು (2)ನೇ ಉಪ-ವಿಭಾಗದಡಿಯಲ್ಲಿ ಸರಕಾರವು ನಾಮನಿರ್ದೇಶಿಸುವ ಒಂದು ನಿಕಾಯವು ಆರು ತಿಂಗಳ ಕಾಲಾವಧಿಗೆ ಅಥವಾ 1975ರ ಕೋಝಿಕೋಡ್ ವಿಶ್ವವಿದ್ಯಾಲಯ ಅಧಿನಿಯಮ (1975ರ 5)ದ ಉಪಬಂಧಗಳಿಗೆ ಅನುಗುಣವಾಗಿ ಸೆನೆಟ್ ಹಾಗೂ ಸಿಂಡಿಕೇಟನ್ನು ಪುನರ್‌ರಚಿಸುವವರೆಗೆ, ಅದರಲ್ಲಿ ಯಾವುದು ಮೊದಲು, ಅಲ್ಲಿಯ ವರೆಗೆ ನಿರ್ವಹಿಸತಕ್ಕದ್ದು.

(2) ಸರಕಾರವು, ಗಜೆಟ್ ಅಧಿಸೂಚನೆಯ ಮೂಲಕ, ಪ್ರಸ್ತುತ ವಿಶ್ವವಿದ್ಯಾಲಯದ ಸೆನೆಟಿನ ಹಾಗೂ ಸಿಂಡಿಕೇಟಿನ ಎಲ್ಲಾ ಅಧಿಕಾರಗಳನ್ನು ನಿರ್ವಹಿಸುವುದಕ್ಕಾಗಿ ಹಾಗೂ ಎಲ್ಲಾ ಹೊಣೆಗಾರಿಕೆಗಳನ್ನು ನೆರವೇರಿಸುವುದಕ್ಕಾಗಿ ಕೆಳಗೆ ಹೇಳಿರುವಂತಹ ಸದಸ್ಯರನ್ನು ಒಳಗೊಂಡ ಒಂದು ತಾತ್ಕಾಲಿಕ ನಿಕಾಯವನ್ನು ನಾಮನಿರ್ದೇಶ ಮಾಡಬಹುದಾಗಿದೆ.—

1. ಸಿಂಡಿಕೇಟಿನ ಪದನಿಮಿತ್ತ ಸದಸ್ಯರುಗಳು.

2. ನಾಮನಿರ್ದೇಶಗೊಳ್ಳುವ ಸದಸ್ಯರುಗಳು:

(i) ವಿಶ್ವವಿದ್ಯಾಲಯದ ಒಬ್ಬ ಅಧ್ಯಾಪಕ;

(ii) ವಿಶ್ವವಿದ್ಯಾಲಯಕ್ಕೆ ಅಫೀಲಿಯೇಟ್ ಮಾಡಲ್ಪಟ್ಟ ಸರಕಾರಿ ಕಾಲೇಜಿನ ಒಬ್ಬ ಅಧ್ಯಾಪಕ;

(iii) ವಿಶ್ವವಿದ್ಯಾಲಯಕ್ಕೆ ಅಫೀಲಿಯೇಟ್ ಮಾಡಲ್ಪಟ್ಟ ಸರಕಾರಿ ಕಾಲೇಜುಗಳಿಂದ ಹಾಗೂ ಅನುದಾನಿತ ಕಾಲೇಜುಗಳಿಂದ ತಲಾ ಒಂದೊಂದು ಪ್ರಾಂಶುಪಾಲರು;

(iv) ವಿಶ್ವವಿದ್ಯಾಲಯಕ್ಕೆ ಅಫೀಲಿಯೇಟ್ ಮಾಡಲ್ಪಟ್ಟ ಅನುದಾನಿತ ಕಾಲೇಜುಗಳಿಂದ ಎರಡು ಅಧ್ಯಾಪಕ ಪ್ರತಿನಿಧಿಗಳು;

(v) ವಿಶ್ವವಿದ್ಯಾಲಯದಲ್ಲಿರುವ ಅಥವಾ ವಿಶ್ವವಿದ್ಯಾಲಯದೊಂದಿಗೆ ಅಫೀಲಿಯೇಟ್ ಮಾಡಲ್ಪಟ್ಟ ಸರಕಾರಿ ಅಥವಾ ಅನುದಾನಿತ ಕಾಲೇಜುಗಳಿಂದ ಇರುವಂತಹ ಒಬ್ಬ ವಿದ್ಯಾರ್ಥಿ;

(vi) ಶಿಕ್ಷಣ ಕ್ಷೇತ್ರದಲ್ಲಿ ಪ್ರವರ್ತಿಸುವ ಆರು ಪ್ರಮುಖ ವ್ಯಕ್ತಿಗಳು, ಅವರಲ್ಲಿ ಒಬ್ಬರು ಮಹಿಳೆ ಹಾಗೂ ಒಬ್ಬರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದಲ್ಲಿ ಒಳಗೊಳ್ಳುವ ವ್ಯಕ್ತಿ ಆಗಿರತಕ್ಕದ್ದು.

3. ರದ್ಧತಿ ಮತ್ತು ರಕ್ಷಣೆ.—(1) 2017ರ ಕೋಝಿಕೋಡ್ ವಿಶ್ವವಿದ್ಯಾಲಯ (ಸೆನೆಟಿನ ಹಾಗೂ ಸಿಂಡಿಕೇಟಿನ ತಾತ್ಕಾಲಿಕ ಬದಲಿ ವ್ಯವಸ್ಥೆ) ಅಧ್ಯಾದೇಶ (2017ರ 24)ವನ್ನು ಈ ಮೂಲಕ ರದ್ದುಗೊಳಿಸಲಾಗಿದೆ.

(2) ಆ ರೀತಿ ರದ್ದುಗೊಳಿಸಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಯಾವುದಾದರೂ ಕಾರ್ಯ ಅಥವಾ ಕೈಗೊಂಡ ಯಾವುದಾದರೂ ಕ್ರಮವು ಈ ಅಧ್ಯಾದೇಶದ ಪ್ರಕಾರ ತಿದ್ದುಪಡಿಮಾಡಲ್ಪಟ್ಟ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

**ಪಿ. ಸದಾಶಿವಂ,**

ರಾಜ್ಯಪಾಲರು.